





ಪಕ್ಕದಲ್ಲಿ ಮಲಗಿದ್ದ ಮಗ ಕಿಟಾರ್ ಅಂತ ಕಿರಿಚ್ಕೊಂಡು ಎದ್ದ, ತಾಯಿ ಗಾಬರಿಯಾದಳು. ಯಾಕಪ್ಪ ಕೆಟ್ಟ ಕನಸು ಏನಾದರು ಬಿತ್ತಾ? ಎಂದು ಕೇಳಿದರು.

ಹೌದಮ್ಮ, ಕನಸಿನಲ್ಲಿ ಸ್ಕೂಲ್ ಬಸ್ ಬಂದಿತ್ತು.

ಬ್ಯಾಂಕ್ ಕ್ಯಾಶಿಯರ್: ಇಷ್ಟು ಹಣ ವಿತ್‌ಡ್ರಾ ಮಾಡಿಕೊಂಡು ಹೋಗುತ್ತಿದ್ದೀರಲ್ಲ, ಎಲ್ಲಿ ಖರ್ಚು ಮಾಡ್ತೀರಿ? ಪ್ರತಿಯೊಂದು ಬಂದ್ ಆಗಿವೆ.
ಗ್ರಾಹಕ: ಇನ್ನೊಂದೆರಡು ದಿನ ಬಿಟ್ಟು ಮತ್ತೆ ಬಂದು ಹಣ ಕಟ್ಟುತ್ತೇನೆ ಸರ್. ಲಾಕ್ ಡೌನ್‌ನಿಂದ ಮನೆಯಲ್ಲಿ ಸುಮ್ನೆ ಕೂತು ಬೇಜಾರಾಗುತ್ತಿದೆ.

***

ರಾಮು: ನಿನ್ನೆ ಹಸ್ತಸಾಮುದ್ರಿಕರ ಹತ್ರ ಹೋಗಿದ್ದೆ ಕಣೋ
ಭೀಮು: ಏನಂದ್ರು?
ರಾಮು: ನಿನ್ನ ಕೈ ನೋಡುವುದಕ್ಕೆ ಆಗಲ್ಲ ಸ್ಯಾನಿಟೈಸರ್ ಹಾಕಿ, ಕೈ ತೊಳೆದು ತೊಳೆದು ರೇಖೆಗಳೆಲ್ಲ ಅಳಿಸಿಹೋಗಿವೆಯಂತೆ.

***

ಮಹಿಳೆ: ಹೊಟ್ಟೆ ಉರಿ ಡಾಕ್ಟ್ರೇ...
ಡಾಕ್ಟರ್: ಯಾವಾಗಿನಿಂದ ಈ ತರ ಆಗ್ತಿದೆ.
ಮಹಿಳೆ: ಮೊನ್ನೆ ಪಕ್ಕದ ಮನೆಯವಳು ಹೊಸ ರೇಷ್ಮೆ ಸೀರೆ ಕೊಂಡಾಗಿನಿಂದ ಡಾಕ್ಟ್ರೇ.

***

ದಂಡ ಕಟ್ಟಿ ಬಿಡಿಸಿಕೊಂಡು ಬಂದ ನಂತರ ಅಪ್ಪ ಗುಂಡನಿಗೆ ಯಾಕೋ ಗುಂಡ ರೈಲ್ವೆ ಟಿಕೆಟ್ ತಗೊಳ್ಳಲಿಲ್ಲ? ಎಂದು ಕೇಳಿದರು.

ಅದಕ್ಕೆ ಗುಂಡ 'ಪರಿಚಯ ಇಲ್ಲದವರ ಹತ್ರ ಏನನ್ನೂ ತಗೋಬೇಡಿ' ಅಂತ ರೈಲ್ವೆ ಸ್ಟೇಷನ್‌ನಲ್ಲಿ ಬರೆದಿತ್ತು ಅಪ್ಪ. ಅದಕ್ಕೆ ಟಿಕೆಟ್ ತಗೊಳ್ಳಲಿಲ್ಲ ಎಂದ.

***

ಮ್ಯಾನೇಜರ್: ನಮ್ಮ ಬ್ಯಾಂಕಿನಲ್ಲಿ ಇಂಟ್ರೆಸ್ಟ್ ಇಲ್ಲದೆ ಲೋನ್ ಕೊಡ್ತಾ ಇದ್ದೇವೆ.
ಲಿಂಗಣ್ಣ: ಕೋಪದಿಂದ, ಕೊಡೋಕೆ ಇಂಟ್ರೆಸ್ಟ್ ಇಲ್ಲಾಂದ್ರೆ ಯಾಕೆ ಕೊಡ್ತೀರಾ? ಬೇಡ ಬಿಡಿ.

***

ಮೇಸ್ಟ್ರು: ಗುಂಡ ಮೊದಲನೇ ಮಹಾಯುದ್ಧವನ್ನು ಮೂರು ವಾಕ್ಯದಲ್ಲಿ ಹೇಳು?
ಗುಂಡ: ಅವ್ರು ಇವ್ರಿಗೆ ಹೊಡೆದ್ರು. ಇವ್ರು ಅವ್ರಿಗೆ ಹೊಡೆದ್ರು. ಬದುಕುಳಿದವರು ಮನೆಗೆ ಹೊದ್ರು.

***

ಮಹಿಳೆ: ಡಾಕ್ಟ್ರೇ ನನ್ನ ಗಂಡ ರಾತ್ರಿ ನಿದ್ದೆಯಲ್ಲಿ ಮಾತನಾಡುತ್ತಿದ್ದಾರೆ ಏನು ಮಾಡಲಿ?
ಡಾಕ್ಟ್ರ್: ಅವರಿಗೆ ಹಗಲಿನಲ್ಲಿ ಮಾತನಾಡಲು ಅವಕಾಶ ನೀಡಿ.

***

ಗುಂಡ: ಪಪ್ಪಾ ರಾಜಕಾರಣಿಗಳ ಬಟ್ಟೆಗಳೇಕೆ ಬಿಳುಪಾಗಿರುತ್ತವೆ?
ತಂದೆ: ಪಕ್ಷ ಬದಲಾಯಿಸಿದರೂ ಬಟ್ಟೆಗಳು ಬದಲಾಗಬಾರದು ಎಂಬ ಕಾರಣಕ್ಕಾಗಿ.

(ಸಂಗ್ರಹ)
ಶರದ ಕುಲಕರ್ಣಿ, ಬೀದರ್

ರೋಗಿ: ಡಾಕ್ಟ್ರೇ, ಬೆಳಿಗ್ಗೆಯಿಂದ ನನಗೆ ಹೊಟ್ಟೆ ತುಂಬಾ ನೋಯ್ತಿದೆ.
ವೈದ್ಯ: ಬೆಳಿಗ್ಗೆ ಏನು ತಿಂದಿದ್ದೀರಿ?
ರೋಗಿ: ಮೊಟ್ಟೆ ತಿಂದಿದ್ದೆ.
ವೈದ್ಯ: ಮಧ್ಯಾಹ್ನ ಏನು ತಿಂದ್ರಿ?
ರೋಗಿ: ಕೋಳಿ.
ವೈದ್ಯ: ಬೆಳಿಗ್ಗೆ ತಿಂದ ಮೊಟ್ಟೆಯ ಮೇಲೆ ಮಧ್ಯಾಹ್ನ ತಿಂದ ಕೋಳಿ ಕೂತಿದೆ. ಅದಕ್ಕೇ ನಿಮಗೆ ಹೊಟ್ಟೆ ನೋಯ್ತಿದೆ. ರಾತ್ರಿ ಕುರಿ ತಿನ್ನಿ, ಸರಿಯಾಗುತ್ತದೆ!

***

ಒಬ್ಬರು ಬೆಲೆಬಾಳುವ ಬಟ್ಟೆಗಳನ್ನು ಕೊಂಡು ಸೂಟ್ ಹೊಲಿಸಲು ದರ್ಜಿಯ ಬಳಿಗೆ ಬಂದರು.

ದರ್ಜಿ, ಅವರು ತಂದ ಬಟ್ಟೆಗಳನ್ನು ಅಳತೆ ಮಾಡಿ, 'ಬಟ್ಟೆ ಕಡಿಮೆ ಇದೆ, ಇದು ಸೂಟ್‌ಗೆ ಸಾಕಾಗಲ್ಲ' ಎಂದ.

ಅವರು ಬೇರೊಬ್ಬ ದರ್ಜಿ ಬಳಿ ಬಂದರು. ಆತ 'ನೀವು ವಾರದ ನಂತರ ಬನ್ನಿ' ಎಂದ.

ವಾರದ ನಂತರ ಅವರು ದರ್ಜಿಯ ಬಳಿಗೆ ಬಂದು ಸೂಟ್ ಪ್ಯಾಕ್ ಮಾಡಿಸಿಕೊಂಡರು. ಅಷ್ಟರಲ್ಲಿ ಅಂಗಡಿಗೆ ಐದು ವರ್ಷದ ದರ್ಜಿ ಮಗ ಬಂದ. ಅವನು ಧರಿಸಿದ್ದ ಚಡ್ಡಿ, ಅವರು ಹೊಲಿಸಿದ್ದ ಸೂಟ್ ಬಟ್ಟೆಯನ್ನೇ ಹೋಲುತ್ತಿತ್ತು.

ಅವರು ಈಗ ನೇರವಾಗಿ ಮೊದಲ ದರ್ಜಿಯ ಬಳಿಗೆ ಹೋಗಿ ಹೇಳಿದರು, 'ನೀವು ಬಟ್ಟೆ ಕಡಿಮೆಯಿದೆ ಎಂದು ಹೇಳಿದಿರಿ. ಆದ್ರೆ ಆ ದರ್ಜಿ ಸೂಟ್ ಹೊಲಿದು, ಅದೇ ಬಟ್ಟೆಯಿಂದ ಅವನ ಮಗನಿಗೂ ಚಡ್ಡಿ ಹೊಲಿದಿದ್ದಾನೆ.'

ಆ ಹುಡುಗನಿಗೆ ಎಷ್ಟು ವಯಸ್ಸಿರಬಹುದು. ಐದಿರಬಹುದು.

ನನ್ನ ಮಗನ ವಯಸ್ಸು 16 ಎಂದ ದರ್ಜಿ!

(ಸಂಗ್ರಹ) ಡಿ.ಎನ್. ಶ್ರೀನಾಥ್

